ನಿಜಕ್ಕೂ ಮಹಿಳೆಯರಿಗೆ ಸರಿಯಾದ ಪ್ರೋತ್ಸಾಹ ಸಿಗುತ್ತಿದೆಯೆ.. ಎನ್ನುವ ಪ್ರಶ್ನೆ ಕೇಳಿದರೆ ಸಿಗುವುದು ಮಿಶ್ರ ಉತ್ತರ. 'ಕನ್ನಡ ಮಾತ್ರವಲ್ಲ, ಜಾಗತಿಕವಾಗಿಯೂ ಪರಿಸ್ಥಿತಿ ಹೀಗೆಯೇ ಇದೆ. ಅಲ್ಲೂ ಹೆಚ್ಚು ಹೆಣ್ಣುಮಕ್ಕಳು ಚಿತ್ರ ನಿರ್ದೇಶನಕ್ಕೆ ಬರುವುದಿಲ್ಲ' ಎನ್ನುತ್ತಾರೆ ಕವಿತಾ ಲಂಕೇಶ್. ಇತ್ತೀಚೆಗೆ ಪ್ರಕಟವಾದ ಸಮೀಕ್ಷೆಯೊಂದು ಇದನ್ನೇ ಹೇಳುತ್ತಿದೆ. ಜಾಗತಿಕ ಸಿನಿಮಾದಲ್ಲಿ ಮಹಿಳಾ ನಿರ್ದೇಶಕಿಯರ ಪ್ರಮಾಣ ಶೇಕಡಾ 9 ಹಾಗೂ ಭಾರತದಲ್ಲಿ ಮಹಿಳಾ ನಿರ್ದೇಶಕಿಯರ ಪ್ರಮಾಣ ಶೇಕಡಾ 7 ಎಂದು ಆ ಸಮೀಕ್ಷೆ ತಿಳಿಸಿದೆ.

'ಕನ್ನಡದಲ್ಲಿ ಸಿನಿಮಾದ ಹಿನ್ನೆಲೆ ಕೆಲಸಕ್ಕೆಂದರೆ ಹೆಣ್ಣುಮಕ್ಕಳು ಅಷ್ಟಾಗಿ ಮುಂದೆ ಬರುವುದಿಲ್ಲ. ಅದೇ ಮುಂಬೈಯಲ್ಲಿ ನೋಡಿ– ಎಷ್ಟೊಂದು ಹೆಣ್ಣುಮಕ್ಕಳು ಅಸೋಸಿಯೇಟ್ ಡೈರೆಕ್ಟರ್ ಆಗಿ ದುಡಿಯುತ್ತಿದ್ದಾರೆ. ಇವತ್ತು ಪ್ರಸಿದ್ಧ ನಿರ್ದೇಶಕಿ ಎನ್ನಿಸಿಕೊಂಡಿರುವ ರೀಮಾ ಕಗ್ತಿ ಕೂಡಾ ಹಿಂದೆ ಹಲವು ಚಿತ್ರಗಳಲ್ಲಿ ಅಸೋಸಿಯೇಟ್ ಆಗಿ ದುಡಿದವರು. ಹಿಂದಿಯಲ್ಲಿ ಸಾಕಷ್ಟು ಚಿತ್ರಕಥೆಗಾರ್ತಿಯರೂ ಇದ್ದಾರೆ. ನನ್ನ ಸಿನಿಮಾಗಳಲ್ಲಿ ಅಸೋಸಿಯೇಟ್ಸ್ ಆಗಿ ಒಂದಿಬ್ಬರು ಹುಡುಗಿಯರು ಕೆಲಸ ಮಾಡಿದ್ದಾರೆ. ಮಾಲ್ಗುಡಿ ಡೇಸ್ ಹಿಂದಿ ಮಾಡೋವಾಗ ಒಬ್ಬರು ಬಂದಿದ್ರು. ಆದರೆ ಹೆಚ್ಚಿನವರು ಇದೇ ವೃತ್ತಿಯಲ್ಲಿ ಮುಂದುವರಿಯುವುದಿಲ್ಲ. ನಿಜಕ್ಕೂ ಹೆಣ್ಣುಮಕ್ಕಳು ನಿರ್ದೇಶಕಿ ಅಥವಾ ಕಲಾ ನಿರ್ದೇಶಕಿಯಾದರೆ ಚಿತ್ರದ ಗುಣಮಟ್ಟ ಹೆಚ್ಚುತ್ತದೆ. ಕಲಾನಿರ್ದೇಶನ ಮಹಿಳೆಯರು ಮಾಡೋ ರೀತೀನೆ ಬೇರೆ ಇರುತ್ತೆ. ಬ್ಯಾಚುಲರ್ ಒಬ್ಬ ಮನೆ ಮಾಡೋದಕ್ಕೂ ಗೃಹಿಣಿಯೊಬ್ಬಳು ಮನೆ ಮಾಡೋದಕ್ಕೂ ವ್ಯತ್ಯಾಸ ಇದೆ' ಎನ್ನುತ್ತಾರೆ ಕವಿತಾ.

ವಿಜಯಲಕ್ಷ್ಮೀ ಸಿಂಗ್ ಕೂಡಾ ಈ ಮಾತನ್ನು ಅನುಮೋದಿಸುತ್ತಾರೆ. 'ಮುಂಬೈಯಲ್ಲಿ ಪ್ರೊಫೆಸನಲಿಸಂ ಇದೆ. ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸುವ ಸಾಮರ್ಥ್ಯವನ್ನು ಹೆಣ್ಣುಮಕ್ಕಳು ತೋರಿಸುತ್ತಿದ್ದಾರೆ. ಅದಕ್ಕೇ ಅಲ್ಲಿ ದೊಡ್ಡ ದೊಡ್ಡ ಹೀರೊಗಳೂ ಮಹಿಳೆಯರಿಗೆ ನಿರ್ದೇಶನದ ಅವಕಾಶಗಳನ್ನು ಕರೆದುಕೊಡುತ್ತಿದ್ದಾರೆ. ನಮ್ಮಲ್ಲಿ ಹೊತ್ತುಗೊತ್ತಿಲ್ಲದೆ ದುಡಿಯಲು ಹೆಣ್ಣುಮಕ್ಕಳು ಮುಂದೆ ಬರುವುದು ಕಷ್ಟ. ನನ್ನ ನಿರ್ಮಾಣದ ಸಿನಿಮಾದಲ್ಲಿ ನಾನೇ ಎಷ್ಟೋ ಸಲ ಕೆಲಸ ಮುಗಿದ ಬಳಿಕ ಮಧ್ಯರಾತ್ರಿ ಹೆಣ್ಣುಮಗಳನ್ನು ಮನೆಯವರೆಗೆ ಕರೆದುಕೊಂಡು ಹೋಗಿ ಬಿಟ್ಟುಬಂದದ್ದೂ ಇದೆ. ಆದರೆ ಈ ಕೆಲಸ ಎಲ್ಲರೂ ಎಲ್ಲ ಸಮಯದಲ್ಲೂ ಮಾಡಲು ಆಗುವುದಿಲ್ಲ' ಎನ್ನುತ್ತಾರೆ ಅವರು.

ಸಿನಿಮಾದ ನಿರ್ದೇಶನ, ಕಲಾನಿರ್ದೇಶನ, ಛಾಯಾಗ್ರಹಣಗಳ ವಿಭಾಗದಲ್ಲಿ ಕೆಲಸ ಮಾಡಲು ಹೆಣ್ಣು ಮಕ್ಕಳು ಹೆಚ್ಚು ಉತ್ಸಾಹ ತೋರಿಸುತ್ತಿಲ್ಲ ಎನ್ನುವುದು ನಿಜವೇ. ಅದಕ್ಕೂ ಹಲವು ಕಾರಣಗಳಿವೆ. ಮುಖ್ಯವಾಗಿ ಸಿನಿಮಾ ಕೆಲಸಕ್ಕೆ ಹಗಲು ಮತ್ತು ರಾತ್ರಿಯ ಬೇಧಭಾವ ಮಾಡಲಾಗುವುದಿಲ್ಲ. ಯಾವ ಹೊತ್ತಿನಲ್ಲಾದರೂ ಕೆಲಸ ಮಾಡಲು ಸಿದ್ಧರಿರಬೇಕು. ಕನ್ನಡದಲ್ಲಿ ಇನ್ನೂ ಒಂದು ಸಮಸ್ಯೆಯಿದೆ. ಇಲ್ಲಿ ವೃತ್ತಿಪರತೆ, ಜಾಬ್ ಗ್ಯಾರಂಟಿ ಕಡಿಮೆ. ಸ್ಥಳದಲ್ಲೇ ಚಿತ್ರಕಥೆ ಬದಲಾಗುವುದು, ನಿರ್ಮಾಪಕರ ಫ್ಯಾನ್ಸಿಗೆ ತಕ್ಕಂತೆ ಲೊಕೇಷನ್ ಆಯ್ಕೆ ಮುಂತಾದ ಸಮಸ್ಯೆಗಳೂ ಇವೆ.

ಮಹಿಳೆಯರು ನಿರ್ದೇಶಕರಾಗ ಹೊರಟರೆ ಇರುವ ಸಮಸ್ಯೆಗಳ ಇನ್ನೂ ಒಂದು ಮುಖವನ್ನು ಕವಿತಾ ಲಂಕೇಶ್ ಯಾವುದೇ ಮುಲಾಜಿಲ್ಲದೆ ಬಿಚ್ಚಿಡುತ್ತಾರೆ– 'ಕನ್ನಡದಲ್ಲಿ ಒಂದು ಪ್ರವೃತ್ತಿ ಇದೆ, ನಿರ್ಮಾಪಕರಿಗೆ ಹೀರೊ ಡೇಟ್ ಸಿಕ್ಕರೆ ಸಾಕು, ಸಿನಿಮಾ ಮಾಡೋಣ ಎಂದು ಹೊರಟು ಬಿಡುತ್ತಾರೆ. ಮಹಿಳಾ ನಿರ್ದೇಶಕರು ಬಂದರೆ ಅವರ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಾರೆ. ಚಿತ್ರಕಥೆಯ ಚರ್ಚೆಯನ್ನೇ ತಗೊಳ್ಳಿ... ನಿರ್ಮಾಪಕನ ಕಚೇರಿಯೊಂದಕ್ಕೆ ಹೋಗಿ ಚಿತ್ರಕಥೆಯ ಬಗ್ಗೆ ಚರ್ಚೆ ಮಾಡೋಣ ಎಂದರೆ– ನೀವೇನ್ ಮೇಡಂ, ಮನೇಲೇ ಇರ್ತೀರಾ. ಹೊರ ಊರಿಗೆ ಹೋಗಿ ಒಂದೈದು ದಿನ ಕುಳಿತು ಆರಾಮವಾಗಿ ಚಿತ್ರಕಥೆ ಚರ್ಚೆ ಮಾಡೋಣ ಬನ್ನಿ ಅಂತಾರೆ! ಅಥವಾ ಸಂಜೆ ಮೇಲೆ ಗುಂಡು ಪಾರ್ಟಿ ಮಾಡುತ್ತಾ ಚರ್ಚೆ ಮಾಡೋಣ ಅಂತಾರೆ. ಇದೆಲ್ಲ ಪ್ರಶ್ನೆ ಬಂದಾಗ ಮಹಿಳೆಯರು ಸಹಜವಾಗಿಯೇ ಹಿಂಜರಿಯುತ್ತಾರೆ. ಕಾಸ್ಟಿಂಗ್ ಕೌಚ್ ಎಲ್ಲ ಕಡೆಯೂ ಇದೆ..'

ಈ ಮಧ್ಯೆ ಮಹಿಳೆಯರಿಗೆ ಕಮರ್ಷಿಯಲ್ ಸಿನಿಮಾ ಮಾಡುವ ತಾಖತ್ತಿಲ್ಲ ಎಂದು ಗಾಂಧಿನಗರ ಗಾಢವಾಗಿ ನಂಬಿಕೊಂಡಿದೆ. ಈ ನಂಬಿಕೆ ಎಷ್ಟು ಗಾಢವಾಗಿದೆಯೆಂದರೆ ಸ್ವತಃ ಸೃಜನಶೀಲ ನಿರ್ದೇಶಕಿಯರೂ ಇದನ್ನು ಸ್ವಲ್ಪ ಮಟ್ಟಿಗೆ ನಂಬಿಕೊಂಡಿದ್ದಾರೆ. ಸುಮನ್ ಕಿತ್ತೂರು ಅವರ ಉದಾಹರಣೆಯನ್ನೇ ನೋಡಬಹುದು. 'ಹೆಣ್ಣುಮಕ್ಕಳಿಗೆ ಬೇರೆ ತರಹದ ಚಿತ್ರಗಳು ಮಾಡಲು ಬರಲ್ಲ ಅಂತಾರೆ. ನಾನು ಭೂಗತ ಜಗತ್ತಿನ ಬಗ್ಗೆ ಚಿತ್ರ ಮಾಡಿದ್ದೇನೆ. ಶ್ರೀಧರ್ ಸರ್ ಅವರ ಪ್ರಭಾವವದು. ಅವರು ನನಗೆ ತುಂಬ ಪ್ರೋತ್ಸಾಹ ಕೊಟ್ಟರು. 'ದಾದಾಗಿರಿಯ ದಿನಗಳು' ಚಿತ್ರ ಮಾಡುವ ಬಗ್ಗೆ ಚರ್ಚೆ ನಡೆದಾಗ ಶ್ರೀಧರ್ ಸರ್ ನನಗೇ ಅದನ್ನು ನಿರ್ದೇಶನ ಮಾಡಲು ಹೇಳಿದ್ದರು. ಆದರೆ ನಾನೇ ಹಿಂಜರಿದೆ. ಭೂಗತ ಜಗತ್ತಿನ ಕಥೆಯನ್ನು ಮಹಿಳೆಯೊಬ್ಬರು ನಿರ್ದೇಶಿಸಿದರೆ ಪ್ರೇಕ್ಷಕರು ಅದನ್ನು ಒಪ್ಪಿಕೊಳ್ತಾರಾ ಅನ್ನುವ ಭಯ ನನಗೂ ಇತ್ತು. ಆದರೆ ಬಳಿಕ ಎದೆಗಾರಿಕೆ ಚಿತ್ರ ವನ್ನು ನಿರ್ದೇಶಿಸಿದ ಬಳಿಕ ಎಲ್ಲರೂ ಅದನ್ನು ಮೆಚ್ಚಿಕೊಂಡರು' ಎನ್ನುತ್ತಾರೆ ಸುಮನ್.

ಒಂದು ಕಾಲದಲ್ಲಿ ಕನ್ನಡ ಸಿನಿಮಾದಲ್ಲಿ ಭೂಗತ ಜಗತ್ತನ್ನು ನೋಡುವ ಕಪ್ಪು–ಬಿಳುಪು ಕ್ರಮವಿತ್ತು. ಆದರೆ ಸುಮನಾ ಅವರು ಎದೆಗಾರಿಕೆ ಚಿತ್ರ ಮಾಡಿದ ಬಳಿಕ ಭೂಗತ ಜಗತ್ತನ್ನು ಹೀಗೂ ನೋಡಬಹುದು ಎನ್ನುವು ಹೊಸ ನೋಟವೊಂದು ದಕ್ಕಿತು.

ಪ್ರತಿಭಾವಂತ ಹೊಸ ನಿರ್ದೇಶಕರು ಕನ್ನಡದಲ್ಲಿ ಎದುರಿಸುವ ನಿರ್ಮಾಪಕರ ಕೊರತೆಯ ಸಮಸ್ಯೆಯನ್ನು ನಿರ್ದೇಶಕಿಯರೂ ಎದುರಿಸುತ್ತಾರೆ. ಎದೆಗಾರಿಕೆ ಚಿತ್ರದ ಯಶಸ್ಸಿನ ಬಳಿಕ ಸುಮನ್ ಅವರಿಗೆ 'ಕಿರಗೂರಿನ ಗಯ್ಯಾಳಿಗಳು' ಚಿತ್ರಕ್ಕೆ



'ಎದೆಗಾರಿಕೆ' ಚಿತ್ರದಲ್ಲಿ ಆದಿತ್ಯ